# ಆಸ್ಕರ್‌ತಂತಿ ಮೀಟಿದ ನಾಟು ನಾಟು

ತೆಲುಗಿನ ‘ಆರ್‌ಆರ್‌ಆರ್’ ಸಿನಿಮಾದ ‘ನಾಟು ನಾಟು’ ಗೀತೆ ಆಸ್ಕರ್ ಪ್ರಶಸ್ತಿ ಪಡೆದಿದೆ. ಆ ಹಾಡಿನ ವಿಶೇಷವೇನು? ಅದು ರೂಪುಗೊಂಡಿದ್ದು ಹೇಗೆ?

■ ವಿಶಾಖ ಎನ್.



‘ನಾಟು ನಾಟು’ ರೂವಾರಿಗಳು
ಸಂಗೀತ ಸಂಯೋಜಕ ಕೀರವಾಣಿ, ಗೀತರಚನೆಕಾರ ಚಂದ್ರಬೋಸ್

‘ಪೋಲ್ಲರಮ್ಮ ಜಾತ್ರೆಯಲಿ ಪೋತರಾಜು ಕುಣಿದಂತೆ, ಮರದ ಪಾದುಕೆ ತೊಟ್ಟು ಕಡ್ಡಿಯನ್ನು ಆಡಿಸಿದಂತೆ, ಆಲದಮರದ ನೆರಳಲ್ಲಿ ಹುಡುಗರ ಗುಂಪು ಸೇರಿಕೊಂಡಂತೆ, ಹಸಿಮೆಣಸಿನ ಜತೆ ಜೋಳದ ರೊಟ್ಟಿ ಸವಿದಂತೆ... ನನ್ನ ಹಾಡು ಕೇಳು’ ಎಂಬರ್ಥದ ಸಾಲುಗಳಿಂದ ಸಿಂಗರಗೊಂಡ ‘ನಾಟು ನಾಟು’ ದೇಸಿ ಸೊಗಡಿನ ಹಾಡಿಗೆ ಈಗ ಆಸ್ಕರ್ ಮನ್ನಣೆ. ‘ಸ್ವಂತಿಕೆ ಸಂಯೋಜನೆ’ ಎನ್ನುವ ವಿಭಾಗದಲ್ಲಿ ಈ ಹಾಡಿಗೆ ಪ್ರಶಸ್ತಿ ಪುರಸ್ಕಾರ ಸಂದಿದೆ. ಇದೇ ವರ್ಷ ಜನವರಿಯಲ್ಲಿ ‘ಗೋಲ್ಡನ್ ಗ್ಲೋಬ್’ ಪ್ರಶಸ್ತಿ ಕೂಡ ಇದೇ ಹಾಡಿಗೆ ಸಂದಿತ್ತು.

ಈ ಹಾಡಿಗಿಂತ ಮೇಲ್ಮಟ್ಟದ ಎಷ್ಟೋ ಸಿನಿಮಾ ಗೀತೆಗಳನ್ನು ಸ್ವರ ಸಂಯೋಜಕ ಎಂ.ಎಂ. ಕೀರವಾಣಿ ಕೊಟ್ಟಿದ್ದಾರೆ. ಅವುಗಳ ಮುಂದೆ ಇದೇನೂ ಅಲ್ಲ ಎಂಬರ್ಥದ ಟೀಕೆ–ಟಿಪ್ಪಣಿಗಳೂ ಈಗ ವ್ಯಕ್ತವಾಗುತ್ತಿವೆ. ಆದರೆ, ‘ನಾಟು ನಾಟು’ ವಿಶ್ವದ ಗಮನ ಸೆಳೆಯಲು ಹಲವು ಕಾರಣಗಳಿವೆ. ಒಂದು, ‘ಆರ್‌ಆರ್‌ಆರ್’ ಸಿನಿಮಾದ ಕಥೆ ಸ್ವಾತಂತ್ರ್ಯಪೂರ್ವದ ಕಾಲಘಟ್ಟದ್ದು. ಈ ಹಾಡಿನಲ್ಲಿ ಬ್ರಿಟಿಷರ ನಡುವೆ ಇಬ್ಬರು ದೇಸಿ ಯುವಕರು ಏಕಲಾಲಿತ್ಯದಲ್ಲಿ ಕುಣಿದು, ಬ್ರಿಟಿಷರಲ್ಲೇ ಒಬ್ಬ ಯುವಕನನ್ನು ಚಿತ್ ಮಾಡುತ್ತಾರೆ. ಅಲ್ಲಿಗೆ ಒಂದು ಬಗೆಯಲ್ಲಿ ಈ ಹಾಡಿಗೆ ಸ್ವಾತಂತ್ರ್ಯ ಹೋರಾಟದ ಚೌಕಟ್ಟೊಂದು ಪ್ರಾಪ್ತಿಯಾದಂತೆ ಆಯಿತು. ಇನ್ನೊಂದು, ಹಾಡಿನಲ್ಲಿ ಇರುವ ನೃತ್ಯ ಲಾಲಿತ್ಯ ಹಾಗೂ ಅದನ್ನು ವಿಶ್ವದ ಹಲವೆಡೆ ಜನರು ಅನುಕರಿಸಿ ಪುಂಖಾನುಪುಂಖವಾಗಿ ವಿಡಿಯೊ, ರೀಲ್ಸ್ ಮಾಡಿದ್ದು. ಮೂರು, ಕೀರವಾಣಿ ಅವರಿಗೆ ಇರುವ ಜಾನಪದ ಸಂಗೀತ ಲಯದ ಮೇಲಿನ ಹಿಡಿತ.

ಗೋಲ್ಡನ್ ಗ್ಲೋಬ್ ಪ್ರಶಸ್ತಿ ಗೆದ್ದಾಗ ಕೀರವಾಣಿ ಮೊದಲಿಗೆ ನೃತ್ಯ ಸಂಯೋಜಕ ಪ್ರೇಮ್‌ರಕ್ಷಿತ್ ಅವರನ್ನು ಅಭಿನಂದಿಸಿದ್ದರು. ಅದಾದಮೇಲೆ ರಕ್ಷಿತ್ ಹಾಡಿಗೆ ನೃತ್ಯ ಸಂಯೋಜನೆ ಮಾಡಿದ ಪ್ರಸಂಗವನ್ನು ಮೆಲುಕುಹಾಕಿದ್ದರು. ‘ರಾಮ್‌ಚರಣ್ ಕುಣಿತದ ವರಸೆಯಲ್ಲಿ ಒಂದು

